## 11

# ಯೇಸು: ಎಲ್ಲಾ ಆಶೀರ್ವಾದಗಳ ಸ್ಥಳ

ಮಳೆ, ಬಿಸಿಲು ಮತ್ತು ವಿಫುಲವಾದ ದೈಹಿಕ ಆಶೀರ್ವಾದಗಳು ಭಕ್ತರಿಗೂ ಪಾಪಿಗಳಿಗೂ ದೇವರಿಂದ ಕೊಡಲ್ಪಟ್ಟಿವೆ (ಮತ್ತಾಯ 5:45). "ಆಕಾಶದಿಂದ ಮಳೆಯನ್ನೂ ಸುಗ್ಗೀಕಾಲಗಳನ್ನೂ ದಯಪಾಲಿಸಿ [ಅವರ] ಮನಸ್ಸುಗಳನ್ನು ಆನಂದದಿಂದ" (ಅಪೊಸ್ತಲರ ಕೃತ್ಯಗಳು 14:17) ದುಷ್ಟರನ್ನೂ ಹಾಗೆಯೇ ನೀತಿ ವಂತರನ್ನೂ ತೃಪ್ತಿಗೊಳಿಸುವನು. ಹೀಗಿದ್ದರೂ ಇದು ಆತ್ಮಿಕ ಆಶೀರ್ವಾದಗಳ ಬಗ್ಗೆ ಸತ್ಯವಾಗಿರುವದಿಲ್ಲ. ತಂದೆಯ ಏಕ ಕುಮಾರನು ಎಲ್ಲಾ ಆತ್ಮಿಕ ಆಶೀರ್ವಾದಗಳನ್ನು ಅನುಗ್ರಹಿಸುವುದು ತಂದೆಯ ಆನಂದವಾಗಿರುತ್ತದೆ (ಯೋಹಾನ 10:9; 14:6; 15:5; ಅಪೊಸ್ತಲರ ಕೃತ್ಯಗಳು 4:12; ಕೊಲೊಸ್ಸೆ 1:27). ಯೇಸುವಿನ ಹೊರಗೆ ಆತ್ಮಿಕ ಆಶೀರ್ವಾದಗಳಿರುವದಿಲ್ಲ; ಆತನಲ್ಲಿ ಎಲ್ಲವೂ ಕಂಡುಬರುತ್ತವೆ (ಎಫೆಸ 1:3).

ಕ್ರಿಸ್ತನ ಹೊರಗಿರುವ ವ್ಯಕ್ತಿಗಳಿಗೆ ಅವರ ಎಲ್ಲಾ ಪಾಪಗಳೂ ಅಪರಾಧಗಳೂ ಇನ್ನೂ ಅವರಿಗೆ ವಿರುದ್ಧವಾಗಿ ಗುರುತಿಸಲ್ಪಟ್ಟಿವೆ; ಆದರೆ ಒಬ್ಬ ವ್ಯಕ್ತಿಯು ಕ್ರಿಸ್ತನೊಳಗೆ ಬರುವ ಕ್ಷಣದಲ್ಲಿಯೇ, ಪ್ರತಿಯೊಂದು ಪಾಪವು ಕ್ಷಮಿಸಲ್ಪಟ್ಟಿದೆ ಮತ್ತು ಮರೆಯಲ್ಪಟ್ಟಿದೆ ಎಂಬ ವಾಗ್ದಾನವು ಸುಳ್ಳು ಹೇಳಲಾರದಾತನಿಂದ ಕೂಡಲ್ಪಡುತ್ತದೆ (ಇಬ್ರಿಯ 8:12). ಕ್ರಿಸ್ತನ ಹೊರಗಿರುವವರು ಪರಲೋಕದಿಂದ ಆಂತರ್ಯದಲ್ಲಿ ವಾಸಿಸುವ ಅತಿಥಿಯನ್ನು, ದೇವರ ಆತ್ಮನನ್ನು ಅನುಭವಿಸಲಾರನು, ಆದರೆ ಯೇಸುವಿಗೆ ವಿಧೇಯ ನಾದ ಪ್ರತಿಯೊಬ್ಬನೊಂದಿಗೆ ವಾಸಿಸಲು ಆತನು ಬರುವನು (ಯೋಹಾನ 14:17; ಅಪೊಸ್ತಲರ ಕೃತ್ಯ 2:38; 5:32; ಗಲಾತ್ಯ 4:6).

ಅವಿಶ್ವಾಸಿಗಳು ತಮ್ಮ ಸ್ವಂತ ಬೆಳಕಿನಲ್ಲಿ ನಿಂತು ಕೊಂಡಿರುವರು ಮತ್ತು ತಮ್ಮ ಸ್ವಂತ ಅತ್ಯುತ್ತಮವಾದ ಆಸಕ್ತಿಗಳಿಗೆ ವಿರುದ್ಧವಾಗಿ ಕಾರ್ಯ ಮಾಡುತ್ತಿರುವರು. ಯೇಸುವಿನೊಳಗೆ ಪ್ರವೇಶಿಸಿದವರು ತಮ್ಮನ್ನು ವಿಶ್ವದ ನಿಯಮಗಳೊಂದಿಗೆ ತಮ್ಮನ್ನು ಒಪ್ಪಿಗೆಯಲ್ಲಿಟ್ಟು ಕೊಂಡಿರುವರು. ಎಲ್ಲಾ ಸಂಗತಿಗಳು ಒಳ್ಳೆಯದಕ್ಕಾಗಿ ಕಾರ್ಯಮಾಡುವವು ಎಂಬ ವಾಗ್ದಾನ ಅವರಿಗೆ ಇರುವುದು (ರೋಮಾಪುರ 8:28).

ದೇವರಲ್ಲಿ ನಂಬಿಕೆಯಿಡುವವರಿಗೆ ಆದರೆ ಕ್ರಿಸ್ತನ ಹೊರಗೆ ಉಳಿದುಕೊಳ್ಳುವ ವರಿಗೆ "ನಮ್ಮ ತಂದೆಯೇ" ಎಂದು ಹೇಳಿ ಪ್ರಾರ್ಥಿಸುವ ಹಕ್ಕು ಇರುವದಿಲ್ಲ "ನಮ್ಮ ಸೃಷ್ಟಿಕರ್ತನೇ" ಎಂದು ಅವರು ಸರಿಯಾಗಿ ಹೇಳಬಲ್ಲರು. ಅದಕ್ಕೆ ವಿರುದ್ಧವಾಗಿ, ಕ್ರಿಸ್ತನಲ್ಲಿ ಇರುವವರು, ತಂದೆಯ ಕುಟುಂಬದಲ್ಲಿ ಸ್ವೀಕರಿಸಲ್ಪಟ್ಟಿದ್ದಾರೆ. "ಅಪ್ಪಾ! ತಂದೆಯೇ!" ಎಂದು ಆತನನ್ನು ಕರೆಯಲು ಅವರ ಬಗ್ಗೆ ಇಷ್ಟವುಳ್ಳವನಾಗಿದ್ದಾನೆ (ಗಲಾತ್ಯ 4:5-7). ಅದರಂತೆ ಕ್ರಿಸ್ತನ ಹೊರಗೆ ಇರುವವರಿಗೆ ಅವರಿಗಾಗಿ ಮಾತನಾಡಲು ದೊಡ್ಡ ಅಣ್ಣನಿರುವದಿಲ್ಲ. ದೇವರ ಕುಟುಂಬದ ಸದಸ್ಯರುಗಳಿಗೆ ಯೇಸುವು ದೇವರ ಬಳಿಯಲ್ಲಿ ದೊಡ್ಡ ಅಣ್ಣನಂತಿರುತ್ತಾನೆ. ನೀತಿಯುಳ್ಳ ನ್ಯಾಯವಾದಿಯಂತೆ ವರ್ತಿಸುತ್ತಾನೆ ಮತ್ತು ಅವರಿಗಾಗಿ ವಿಜ್ಞಾಪನೆ ಮಾಡುತ್ತಾನೆ (ಇಬ್ರಿಯ 7:25; 1 ಯೋಹಾನ 2:1, 2).

ಕ್ರೈಸ್ತೇತರ ಸಂಘಟನೆಗಳು ಸಾಮಾನ್ಯವಾಗಿ ಕ್ರೈಸ್ತರ ಜೀವಿತಗಳನ್ನು ಮತ್ತು ಸಂಬಂಧಗಳನ್ನು ಅಭಿವೃದ್ಧಿಗೊಳಿಸುವ ಆತ್ಮಿಕ ವಿಷಯಗಳ ಕೊರತೆಯುಳ್ಳವುಗಳಾ

ಗಿರುತ್ತವೆ. ಒಬ್ಬ ವ್ಯಕ್ತಿಯು ಕ್ರಿಸ್ತನ ಬಳಿಗೆ ಬರುವಾಗ, ಅವನು ಭೂಮಿಯ ಮೇಲಿನ ಅತ್ಯುತ್ತಮ ಜನಾಂಗದೊಂದಿಗೆ ಅನ್ಯೋನ್ಯತೆಯೊಳಗೆ ಬರುತ್ತಾನೆ. ಅವರ ನಿಯಮವು ಹೆಚ್ಚು ಉನ್ನತವಾಗಿರುವುದು ಹಾಗೂ ಅವರ ಧ್ಯೇಯವು (ತಂದೆಯ ಚಿತ್ತವನ್ನು ಮಾಡುವುದು; ಯೋಹಾನ 6:38) ಭೂಮಿಯ ಮೇಲೆ ಯಾವುದಕ್ಕೂ ಹೋಲಿಕೆಯಿಂದ ಇರುವದಿಲ್ಲ. ಕ್ರಿಸ್ತನಲ್ಲಿ ಇರುವವನಿಗೆ ಬೆಳಗಿನಲ್ಲಿ ಭಕ್ತರ ಭಾಧ್ಯತೆಯಲ್ಲಿ ಭಾಗಿಗಳಾಗುವದಕ್ಕೆ ಯೋಗ್ಯರಾಗಿ ಮಾಡಲ್ಪಟ್ಟವರೊಂದಿಗೆ ಅನ್ಯೋನ್ಯತೆಯಿರುವುದು. ಹೊರಗಿನ ಕತ್ತಲೆಯೊಳಗೆ ದೊಬ್ಬಲ್ಪಡಲು ತಮ್ಮನ್ನು ಯೋಗ್ಯರನ್ನಾಗಿ ಮಾಡಿಕೊಳ್ಳುವವರೊಂದಿಗೆ ತನ್ನ ದಿನಗಳನ್ನು ಅವನು ಕಳೆಯುವದಿಲ್ಲ (ಕೊಲೊಸ್ಸೆ 1:12; ಮತ್ತಾಯ 25:30).

ಪರಿಶುದ್ಧ ಬರಹದ ಕೇವಲ ಎರಡು ವಚನಗಳು ಜನರು ಹೇಗೆ ಕ್ರಿಸ್ತನಲ್ಲಿ ಪ್ರವೇಶಿಸುವರು ಎಂಬುದನ್ನು ಹೇಳುತ್ತವೆ:

> ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? (ರೋಮಾಪುರ 6:3).
>
> ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ಬಾಪ್ತಿಸ್ಮ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ (ಗಲಾತ್ಯ 3:27).

ಬಾಪ್ತಿಸ್ಮ ಹೊಂದುವದರಿಂದ ಒಬ್ಬನು ಕ್ರಿಸ್ತನೊಳಗೆ ಪ್ರವೇಶಿಸುವನೆಂದು ಎರಡೂ ವಾಕ್ಯಭಾಗಗಳು ಹೇಳುತ್ತವೆ. ಯಥಾರ್ಥವಾದ ನಂಬಿಕೆ ಮತ್ತು ನಿಜವಾದ ಮಾನಸಾಂತರವನ್ನು ಹಿಂಬಾಲಿಸಿ ಬಾಪ್ತಿಸ್ಮವು ಕ್ರಿಸ್ತನೊಳಗೆ ಜನರು ಬರುವಂತೆ ಕೊನೆಯ ಆಜ್ಞೆ ನೆರವೇರಿಸಲ್ಪಟ್ಟದ್ದಾಗಿದೆ. ಅನಂತರ ಅನೇಕ ಇತರ ಆಜ್ಞೆಗಳು ಬರುತ್ತವೆ, ಆದರೆ ಬಾಪ್ತಿಸ್ಮವು ಕ್ರಿಸ್ತನಲ್ಲಿ*ರುವದರ* ಮತ್ತು ಕ್ರಿಸ್ತನ *ಹೊರಗೆ* ಇರುವದರ ಮಧ್ಯದಲ್ಲಿ ವಿಭಾಗಿಸುವ ಗೆರೆಯಾಗಿದೆ.

© 2009 Truth for Today